ದಿನಾಂಕಃ 13-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು: ಎದುರುದಾರ ಪರ ಶ್ರೀ ವಿವಿಟಿ ವಕೀಲರಿಂದ:</u>

ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಅಪಘಾತದ ಸಮಯದಲ್ಲಿ ನನ್ನ ವಯಸ್ಸು 43 ವರ್ಷ ಇತ್ತು ಎಂದು ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಯಸ್ಸು 50 ವರ್ಷ ಮೇಲ್ಪಟ್ಟು ಇದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ನಾನು ನನ್ನ ಗಂಡನೊಂದಿಗೆ ಕುಳ್ಳೊಳ್ಳಿ ಗ್ರಾಮಕ್ಕೆ ಮೋಟರ ಸೈಕಲ್ ಮೇಲೆ ಹೋಗುತ್ತಿದ್ದೆವು. ಆ ದಿನ ಮೋಟರ ಸೈಕಲ್ ನನ್ನ ಗಂಡ ಚಲಾಯಿಸುತ್ತಿದ್ದನು. ಮೋಟರ ಸೈಕಲ್ ಚಲಾಯಿಸಲು ನನ್ನ ಗಂಡ ಚಾಲನಾ ಪರವಾನಿಗೆ ಹೊಂದಿರಲಿಲ್ಲ ಎಂದರೆ ಸರಿ. ಅಪಘಾತವು ನನ್ನ ಗಂಡನ ನಿರ್ಲಕ್ಷ್ಯತನದಿಂದ ಜರುಗಿರುತ್ತದೆ, ಕಾರು ಅಪಘಾತಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಚಲಾಯಿಸುತ್ತಿರುವ ಮೋಟರ ಸೈಕಲ್‌ಗೆ ವಿಮೆ ಇರಲಿಲ್ಲ ಮತ್ತು ನನ್ನ ಗಂಡ ಚಾಲನಾ ಪರವಾನಿಗೆ ಇರಲಿಲ್ಲ, ಆದ್ದರಿಂದ ಪರಿಹಾರ ಪಡೆಯುವ ಸಲುವಾಗಿ 1 ನೇ ಎದುರುದಾರ ಮತ್ತು ಪೋಲಿಸರೊಂದಿಗೆ ಮಿಲಾಪೆಯಾಗಿ ಕಾರಿನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಗಂಡನ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ನನ್ನ ಗಂಡ ತಾನು ಮಾಡಿದ ತಪ್ಪನ್ನು ಒಪ್ಪಿಕೊಂಡು ನ್ಯಾಯಾಲಯದ ಆದೇಶದಂತೆ ದಂಡ ಭರಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

ಅಪಘಾತದ ನಂತರ ನನ್ನನ್ನು ಚಿಕಿತ್ಸೆಯ ಸಲುವಾಗಿ ರಬಕವಿಯ ಮೈತ್ರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದು ಸುಮಾರು ಒಂದು ಲಕ್ಷ ರೂಪಾಯಿ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ಚಿಕಿತ್ಸೆಗಾಗಿ ಸುಮಾರು 50 ಸಾವಿರ ರೂಪಾಯಿ ಬೇಕಾಗುತ್ತದೆ ಎಂದು ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ಉಂಟಾದ ಗಾಯಗಳಿಂದ ನನಗೆ ಯಾವುದೇ ಕೆಲಸ ಮಾಡಲು ಬರುವುದಿಲ್ಲ, ಗಾಯಗಳಿಂದ ನೋವು ಅನುಭಸುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ಯಾವುದೇ ಶಾಶ್ವತ ಅಂಗನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ಅಪಘಾತ ಪೂರ್ವದಲ್ಲಿ ಒಕ್ಕಲುತನ ಕೆಲಸದಿಂದ ನಾನು ತಿಂಗಳಿಗೆ

25 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿದ್ದೆನು ಎಂದು ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-6 ರಿಂದ 23 ರ ದಾಖಲೆಗಳನ್ನು ಪ್ರಕರಣಕ್ಕೆ ಬೇಕಾಗುವ ರೀತಿಯಲ್ಲಿ ತಯಾರಿಸಿಕೊಂಡು ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-27 ಮತ್ತು 28 ರ ಆಸ್ತಿಗಳು ನನ್ನ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2026.03.13 17:13:46 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ